## <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## <u>ಸಿ.ಸಿ. ಸಂಖ್ಯೆ:1056/2024</u>

**ಸಾಕ್ಷಿಯನ್ನು ದಿಃ 26.09.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಆಂಥೋಣಿ ಜೋಸೆಫ್ | ಸಿಡಬ್ಲ್ಯೂ3 | ಪಿಡಬ್ಲ್ಯೂ4 |
| ತಂದೆಯ ಹೆಸರು | ಕೆ.ಪಿ. ಸ್ವಾಮಿ ಜೋಸೆಫ್ | | |
| ವಯಸ್ಸು | 50 ವರ್ಷ | | |
| ಉದ್ಯೋಗ | ಚಾಲಕ | | |
| ವಾಸಸ್ಥಳ | ಮರುದೂರು ಗ್ರಾಮ. | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಿಪಿ. 2 ರ ಸ್ಥಳ ಮಹಜರ್ ನಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಸಹಿಯನ್ನು ನಿಪಿ. 2(ಸಿ) ಎಂದು ಗುರುತಿಸಲಾಯಿತು. ಮದುಗಿರಿಕೊಪ್ಪಲು ಗ್ರಾಮದಲ್ಲಿ ಅಪಘಾತ ಆಗಿದ್ದು, ಸ್ಥಳ ಮಹಜರ್ ಗೆಂದು ಹೋದಾಗ ದಿಃ 25.05.2024 ರಂದು ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಇನ್ನು ಇಬ್ಬರು ವ್ಯಕ್ತಿಗಳು ಇದ್ದರು ಅವರ ಹೆಸರು ಗೊತ್ತಿಲ್ಲ ಮತ್ತು ಪೊಲೀಸರು ಇದ್ದರು. ಆಗ ಸಮಯ ಸಂಜೆ 5 ಗಂಟೆ ಆಗಿತ್ತು. ಮಹಜರ್ ಅನ್ನು 5 ರಿಂದ 5.30 ರ ವರೆಗೆ ಮಾಡಿರುತ್ತಾರೆ. ಅಲ್ಲಿ ಜಾಗ ಪರಿಶೀಲನೆ ಮಾಡಿ ನಮ್ಮ ಹತ್ತಿರ ಸಹಿ ಪಡೆದುಕೊಂಡರು. ನಂತರ ಪೋಟೊ ತೆಗೆದುಕೊಂಡರು. ಸದರಿ ಪೋಟೊದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೆ ಸಿಡಿ ಇಲ್ಲ ಎಂದು ತರಾರಿಗೆ ಒಳಪಟ್ಟು ನಿಪಿ. 3 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲು ಸಸಅ ರವರಿಂದಃ–</u>**

ಪೊಲೀಸರು ಮಹಜರ್ ಮಾಡಲು ಬಂದಾಗ ನನ್ನ ಜೊತೆ ಚಾಸಾ 2 ಮತ್ತು 4 ರವರು ಇದ್ದರು ಎಂದರೆ ಸರಿ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಜಿ.ಕೆ ವಕೀಲರಿಂದಃ</u>**

ಪೊಲೀಸರು ಮಹಜರ್ ಗೆ ಬರುವಂತೆ ನನಗೆ ಯಾವುದೆ ನೋಟೀಸು ಕೊಟ್ಟಿಲ್ಲ. ಅಪಘಾತದ ಸ್ಥಳವನ್ನು ತನಿಖಾಧಿಕಾರಿ ನನಗೆ ತೋರಿಸಿದರು. ಚಾಸಾ 2 ಮತ್ತು 4 ರವರ ಪರಿಚಯ ನನಗೆ ಇಲ್ಲ. ನಾನು ಸ್ಥಳಕ್ಕೆ ಹೋಗಿಲ್ಲ, ಠಾಣೆಯಲ್ಲಿ ಸದರಿ ದಾಖಲೆಯನ್ನು ಬನಾವಟ್ ಮಾಡಿ ಅದಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ. 3ರ ಪೋಟೊದಲ್ಲಿ ಚಾಸಾ 2 ಮತ್ತು 4 ರವರನ್ನು ಗುರುತಿಸುತ್ತೇನೆ. ನಿಪಿ. 3 ರ ಪೋಟೊಗೂ ಮತ್ತು ಮಹಜರ್ ಮಾಡಿದ ಸ್ಥಳಕ್ಕೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನಾಗಲಿ, ಚಾಸಾ 2 ಮತ್ತು 4 ರವರಾಗಲಿ ಸ್ಥಳಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.